ಹೇಳಿಕೆ ಮಾತು ರಾಮಚಂದ್ರನಿಗೆ ನೆನಪಾಯ್ತು. ಅವನು ನಾಗಶ್ರೀಯನ್ನು ಹೊಸಬಳನ್ನು ನೋಡುವಂತೆ ಗಮನಿಸಿದ. ನಾಗಶ್ರೀ ತಲೆ ತಗಿಸಿ ಅವನ ದಿಟ್ಟಿ ತಪ್ಪಿಸಿಕೊಂಡಳು.

'ನಾನು ಒಂದು ಇತ್ಯರ್ಥ ಮಾಡ್ಕೊಳ್ಳೋಕೆ ಅಂತ ಅವತ್ತು ಬಂದಿದ್ದು ಕಣೇ. ಎಂತಾ ಅನಾಹುತ ಮಾಡಿಟ್ಟೆ ನೋಡು..' ರಾಮಚಂದ್ರ ಬಿಸುಸುಯ್ದ.

'ನಂಗೂ ಸಾಕಾಗಿತ್ತು. ಅದೊಂದು ಹಾಳು ಕಾಗದ ಅಲ್ದಿದ್ರೆ ನೀವು ಹೇಳಿದ್ದಕ್ಕೆ ನಾನು ಒಪ್ಗಂಬಿಡ್ತಿದ್ದೆ ಅನ್ಸುತ್ತೆ..'

'ಚೆಲ್ಲಿ ಹೋದ ಹಾಲಿಗೆ ಅತ್ತು ಅಂದ ಹಾಗಾಯ್ತು..'

ಅವನು ಹಾಲು ಅನ್ನುತ್ತಿದ್ದಂತೆ ನಾಗಶ್ರೀಗೆ ಅತಿಥಿಧರ್ಮ ಜಾಗೃತವಾದಂತಾಯ್ತು.

'ನನ್ನ ಬುದ್ಧಿಗಿಷ್ಟು. ಮನೆಗೆ ಬಂದೋರಿಗೆ ಗುಟುಕು ನೀರು ಬೇಕಾ ಅಂತ್ಲೂ ಕೇಳ್ಲಿಲ್ಲಲ್ರೀ? ತಡೀರಿ, ಕಾಫಿ ಮಾಡ್ತೀನಿ..'

'ಮಾಡು, ಮಾಡು. ನಿನ್ನತ್ರ ವಾದ ಮಾಡಿ ನಂಗೂ ಗಂಟ್ಲು ಒಣಗಿ ಹೋಗಿದೆ..'

ಮಡದಿಯ ಬೆನ್ನ ಹಿಂದೆ ರಾಮಚಂದ್ರ ಸೀದಾ ಅಡುಗೆಮನೆ ಹೊಕ್ಕ. ನಾಗಶ್ರೀ ಒಲೆ ಉರಿಸಿ ಕಾಫಿ ಮಾಡಿದಳು. ಕಾಫಿಲೋಟವನ್ನು ಗಂಡನ ಕೈಗೆ ಕೊಡುವಾಗ ಪರಸ್ಪರ ಬೆರಳುಗಳು ತಾಕಲಾಡಿ, ಮೈಯಿಡೀ ಬಿಸಿಯೇರಿ, ಕಳೆದು ಹೋದ ವರ್ಷಗಳೆಲ್ಲಾ ಅರಿವಿನಿಂದ ಮರೆವಿಗೆ ಸರಿದು,

'ನೀನೂ ಅರ್ಧ ಕುಡಿ..' ಹೇಳಿದ ರಾಮಚಂದ್ರ.

'ಬ್ಯಾಡ, ಇಷ್ಟೊತ್ತಿಗೆ ಕಾಫಿ ಕುಡಿದ್ರೆ ನಿದ್ದೆ ಬರಲ್ಲ ನಂಗೆ.. '

'ಬರ್ದಿದ್ರೆ ಇಲ್ಲ' ಅಂದ ರಾಮಚಂದ್ರ.

ಕೆಂಪೇರಿದಳು ಈಗ ನಾಗಮ್ಮ ಅನಿಸಿಕೊಂಡಿರುವ ನಾಗಶ್ರೀ. ಮುಂದೇನು? ಎನ್ನುವ ಕುರಿತು ಸಣ್ಣದೊಂದು ಚರ್ಚೆ ನಡೆಯಿತು.

'ನಂಗೊಬ್ಳಿಗೆ ಎಲ್ಲಾದ್ರೇನು? ನಿಮ್ಮ ಮಗ ಹೇಳಿದ್ದು ಕೇಳೋ ಥರ ಕಾಣ್ತಿಲ್ಲ. ಊರು ಬಿಡೋ ತೀರ್ಮಾನ ಮಾಡ್ಬಿಟ್ಟಿದಾನೆ' ಅಂದಳು ನಾಗಶ್ರೀ.

'ನಮ್ಮೂರಲ್ಲಿ ದೆವ್ವ ಇದೆ ಕಣೇ. ಹೆದರುಪುಕ್ಲಿ ನೀನು, ಹೇಗಿರ್ತಿ?'

'ಸುಮ್ನೆ ಚಾಳಿಸ್ಬೇಡಿ ನೀವು. ಹಾಳು ಮನುಷ್ಯರ ಸಾವಾಸಕ್ಕಿಂತಾ ದೆವ್ವಾನೇ ವಾಸಿ ಅನ್ಸುತ್ತೆ..'

'ನನ್ನನ್ನೇ ಬಾ ಅಂತ ಕರೆಯಲ್ವಾ? ನಾನು ನಿಂತ ಕಾಲಲ್ಲಿ ರೆಡಿ. ಈಗ ಯಾವ ಹಂಗೂ ನನಗೆ ಇಲ್ಲಲ್ಲ?'

'ಹೊಳೆ ನೀರಿಗೆ ದೊಣೆನಾಯ್ಕನ ಅಪ್ಪಣೆ ಬೇಕಾ? ಬನ್ನಿ ನೀವೇ..'

ಮಾತು, ಮಾತು ಮತ್ತು ಮಾತು. ತನಗೊಬ್ಬಳಿಗೆ ಎಂದು ಒಂದು ಮುಷ್ಟಿ ಅಕ್ಕಿ ಜಾಸ್ತಿ ಹಾಕಿ ಮಧ್ಯಾಹ್ನವೇ ಅನ್ನ ಬೇಯಿಸಿಟ್ಟುಕೊಂಡಿದ್ದಳು ನಾಗಶ್ರೀ. ತಣ್ಣಗೆ ಕೊರೆಯುತ್ತಿತ್ತು ಅನ್ನ. ಅವಳು ಹೊಸದಾಗಿ ಅಡುಗೆ ಮಾಡಲು ಬಿಡಲಿಲ್ಲ ರಾಮಚಂದ್ರ.

'ನನ್ನ ಹೊಟ್ಟೆ ತುಂಬಿ ಹೋಗಿದೆ ಕಣೇ. ಯಾರಿಗೆ ಬೇಕು ನಿನ್ನ ಊಟ? ಕೊನೆಗಾಲದಲ್ಲಾದ್ರೂ ನೆಮ್ಮದಿ ಸಿಕ್ತಲ್ಲ, ಅಷ್ಟು ಸಾಕು ನಂಗೆ..'

'ಕೊನೆಗಾಲ ಅಂತ ಯಾಕಂತೀರಿ? ನಲವತ್ತೆಂಟಕ್ಕೆ ಕೊನೆಗಾಲ ಅಂತಾರಾ?' ನಾಗಶ್ರೀ ಅವನ ಮಾತಿಗೆ ತಡೆ ಹಾಕಿದಳು.

'ಮತ್ತೇನಂತಾರೆ?'

ಸಂಜೆಮಲ್ಲಿಗೆ ಅರಳುವ ಹೊತ್ತು ಕಿಲಕಿಲ ನಕ್ಕಳು ನಾಗಶ್ರೀ ಕಿಶೋರಿಯಂತೆ.

'ನೀನು ಆವಾಗಿನ ಹಾಗೇ ಇದ್ದಿ..' ರಾಮಚಂದ್ರ ಮೆಚ್ಚುಗೆಯಿಂದ ಹೇಳಿದ. ಅವನದು ಉತ್ಪ್ರೇಕ್ಷೆ ಭರಿತ ಮಾತು ಅನಿಸಿದರೂ ಸಗರ್ವದಿಂದ ಅದನ್ನು ಸ್ವೀಕರಿಸಿದಳು ನಾಗಶ್ರೀ.

ಇದ್ದ ಅನ್ನಕ್ಕೆ ಮಧ್ಯಾಹ್ನದ ಮೇಲೋಗರ ಹಾಕಿಕೊಂಡು ಗಂಡ, ಹೆಂಡತಿ ಉಂಡರು. ಮನಸ್ಸಿನ ಕೊಳೆಯೆಲ್ಲಾ ಕೊಚ್ಚಿ ಹೋಗಿ ನಿರ್ಮಲವಾಗಿದ್ದ ಅಂತರಂಗದಲ್ಲಿ ಹೇಳಲಾಗದ ಅಪೂರ್ವ ಸುಖ, ಶಾಂತಿ. ಒಂದೊಮ್ಮೆ ತನ್ನಮ್ಮ, ಅಪ್ಪ ಅತೃಪ್ತ ಆತ್ಮಗಳಾಗಿ ಅಲೆದಾಡುತ್ತಿದ್ದು ಈ ದೃಶ್ಯ ನೋಡಿದ್ದೇ ಆದರೆ ಖಂಡಿತಾ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಅನಿಸಿತು ನಾಗಶ್ರೀಗೆ. ಸರಿಯಾಗಿ ಇದೇ ಸಮಯಕ್ಕೆ ಹೇಳಿದ ರಾಮಚಂದ್ರ,

'ಇವತ್ತು ನಮ್ಮಮ್ಮನ ಆತ್ಮಕ್ಕೆ ಶಾಂತಿ ಸಿಕ್ಕಿರುತ್ತೆ'

ಅಡುಗೆಮನೆಯಲ್ಲಿ ಉಳಿದ ಚೂರುಪಾರು ಕೆಲಸ ಮುಗಿಸಿ, ಮುಂಬಾಗಿಲು ಭದ್ರಪಡಿಸಿ, ಮಲಗುವ ಸಿದ್ಧತೆ ನಡೆಸಲು ನಾಗಶ್ರೀ ಕೋಣೆಗೆ ಹೋದಳು. ಅವಳನ್ನು ಕ್ಷಣವೂ ಬಿಟ್ಟಗಲಿರಲಾರೆ ಎನ್ನುವಂತೆ ಹಿಂಬಾಲಿಸಿಕೊಂಡು ಹೋದ ರಾಮಚಂದ್ರ. ಬೀರುವಿನಿಂದ ಹೊಸ ಬೆಡ್ಶೀಟ್ ಹೊರಗೆ ಬಂತು. ಮಂಚದ ಮೇಲಿನ ಹಳೆಯದನ್ನು ಮುದ್ದೆ ಮಾಡಿ ಬದಿಗೆ ಬಿಸಾಕಿದಳು ನಾಗಶ್ರೀ.

'ಅದ್ಯಾಕೆ ಹೊಸ್ತು ಹಾಕ್ತಿದ್ದಿ?' ಕೀಟಲೆಯಿಂದ ಕೇಳಿದ ರಾಮಚಂದ್ರ.

'ಹೀಗೇ.., ಸುಮ್ನೇ..' ಅವನ ಮುಖ ನೋಡದೆ ಪ್ರತ್ಯುತ್ತರ ಬಂತು.

'ಈಗ ಉಪ್ಪರಿಗೆ ಮೇಲಿನ ಕೋಣೆ ಮಕ್ಕಳಿಗೆ ಬಿಟ್ಟು ಕೊಟ್ಟಿದೀನಿ..' ಅವನು ಕೇಳದೆಯೇ ಹೇಳಿದಳು ನಾಗಶ್ರೀ.

'ನಾನು ಎಲ್ಲಿ ಮಲಗೋದು? ಉಪ್ಪರಿಗೆ ಮೇಲೆ ಹೋಗ್ಲಾ?'

'ನನ್ನ ಬಾಣಂತನ ಮುಗಿದಿದೆ' ಅಂದಳು ನಾಗಶ್ರೀ.

* * *

ಅಕ್ಕ, ತಮ್ಮ ಮತ್ತು ಹೊಸ ಭಾವನ ಪ್ಲಾನು. ಭರ್ತಿ ಓದಿಕೊಂಡವರು ಭಾವ. ಸಿನಿಮಾ ಗಿನಿಮಾ, ಕತೆ ಗಿತೆ ಎಂದು ನೋಡಿದವರು, ಓದಿದವರು. ತಲೆ ಉಪಯೋಗಿಸಿ ಏನೇನು ಮಾಡಬೇಕೆಂದು ಹೇಳಿಕೊಟ್ಟಿದ್ದು ಅವರೇ. ಮುಕ್ತ ಸಂವಹನದ ಕೊರತೆಯಿಂದ ಪಾಚಿಗಟ್ಟುವ ಕಿಲುಬು, ಹಿತ್ತಾಳೆ ಕಿವಿಯ ಪರಿಣಾಮದ ಕಿಲುಬು, ತಪ್ಪು ತಿಳಿವಳಿಕೆಯ ಕಿಲುಬು, ಪ್ರತಿಷ್ಠೆಯ ಫಲಶ್ರುತಿಯಿಂದಾಗುವ ಕಿಲುಬು, ಮುಂತಾದ ದೊಡ್ಡ ದೊಡ್ಡ ಪದ ಉಪಯೋಗಿಸಿ ಅವರು ಮಾತಾಡಿದ್ದು ಪದ್ಮನಾಭನಿಗೆ ಪೂರಾ ಅರ್ಥವಾಗಿರಲಿಲ್ಲ.

'ಕಾಲೇಜು ಲೆಕ್ಚರರ್ ಅಂದ್ರೆ ಹೀಗೇ ಕಣೋ. ಸುಲಭವಾಗಿ ಅರ್ಥ ಆಗೋದನ್ನ ಅರ್ಥ ಆಗ್ದಿದ್ದ ಹಾಗೆ ಮಾತಾಡ್ತಾರೆ..' ಗಂಭೀರವಾದ ಚರ್ಚೆಯ ನಡುವೆ ನಗೆಚಾಟಿಕೆಯ ಮಾತಾಡಿ ಭಾವನ ಹತ್ತಿರ ಬೈಸಿಕೊಂಡಿದ್ದಳು ಅಕ್ಕ. ಪದ್ಮನಾಭ ತಾನೇನು ಮಾಡಬೇಕು? ಅನ್ನುವುದಷ್ಟನ್ನು ಸರಿಯಾಗಿ ಕೇಳಿಸಿಕೊಂಡು ಕಾರ್ಯರೂಪಕ್ಕೆ ತಂದಿದ್ದ.

'ನಾವು ಮಾಡೋ ಕೆಲಸವನ್ನ ಪ್ರಾಮಾಣಿಕವಾಗಿ ಮಾಡೋದು. ಮುಂದೇನಾಗುತ್ತೆ ಅನ್ನೋದರ ಬಗ್ಗೆ ತಲೆ ಕೆಡಿಸ್ಕೋಬಾರ್ದು' ಅಂದಿದ್ದರು ಭಾವ.

ಮಾಡುವ ಕೆಲಸ ಅಂದುಕೊಂಡಂತೆ ಮಾಡಿ ಮುಗಿಸಿಯಾಗಿದೆ. ಮುಂದಿನದು ಅವರಿಬ್ಬರಿಗೆ ಬಿಟ್ಟದ್ದು. ಅಪ್ಪ, ಅಮ್ಮ ಜೊತೆಗೆ ಇರುವಂತಾದರೆ ಎಷ್ಟು ಚಂದ ಎಂದು ಕಲ್ಪಿಸಿಕೊಳ್ಳುತ್ತಾ ಬೆಳಿಬೆಳಿಗ್ಗೆ ಕಾಗೆ ಕರ್ರ್ ಎನ್ನುವುದರೊಳಗೆ ಮನೆಬಾಗಿಲಿಗೆ ಬಂದು ಬಾಗಿಲು ಬಡಿದಿದ್ದ ಪದ್ಮನಾಭ. ಮೆಟ್ಟಿಲ ಕೆಳಗಿದ್ದ ಚಪ್ಪಲಿ ಜೋಡಿ ನೋಡಿ ಅವನಿಗೆ ಇನ್ನಿಲ್ಲದ ಸಂಭ್ರಮವಾಗಿತ್ತು. ಯಾವುದೋ ದೊಡ್ಡ ಕೆಲಸ ಮಾಡಿ ಪೂರೈಸಿದವನ ಹೆಮ್ಮೆ. ತುರುಬು ಸುತ್ತಿಕೊಳ್ಳುತ್ತಾ ಎದ್ದು ಬಂದು ಬಾಗಿಲು ತೆಗೆದಿದ್ದಳು ನಾಗಮ್ಮ. ಮನೆ ಬಾಗಿಲಲ್ಲಿ ಉದ್ದಕ್ಕೆ ನಿಂತ ಮಗನ ಕಣ್ಣು ತಪ್ಪಿಸುತ್ತಾ ಕೇಳಿದ್ದಳು,

'ಕತ್ತೆ ಮುಂಡೇಗಂಡ, ನೀನನೋ? ಇಷ್ಟು ಬೆಳಗಾಮುಂಚೆ ಎಲ್ಲಿಂದ ಬರ್ತಿದ್ದಿ?'

'ಪೇಟೆಗೆ ಹೋಗ್ಲಿಲ್ಲ ಕಣೇ. ಇಲ್ಲೇ ಫ್ರೆಂಡ್ ಮನೇಲಿ ಉಳ್ಕಂಡಿದ್ದೆ..'

ಒಳ್ಳೇ ಕೆಲ್ಸ ಮಾಡ್ದಿ ಎನ್ನುವ ಮಾತನ್ನು ಗಂಟಲೊಳಗೆ ನುಂಗಿಕೊಂಡಳು ನಾಗಮ್ಮ. ಉಪ್ಪರಿಗೆ ಕೋಣೆಗೆ ಹೋಗಲಿದ್ದ ಅನಂತಪದ್ಮನಾಭ ಅರೆ ತೆರೆದಿದ್ದ ಅಮ್ಮನ ಕೋಣೆಯ ಬಾಗಿಲ ಕಡೆ ವಾರೆಗಣ್ಣಲ್ಲಿ ನೋಡಿದ. ಅಲ್ಲಿ ಅಪ್ಪ ಕಾಲು ನೀಡಿ ಮಲಗಿದ್ದು ನಿಚ್ಚಳವಾಗಿ ಕಂಡು ಬಂದು ಹುಡುಗನಿಗೆ ಕುಣಿಕುಣಿದಾಡುವಂತಾಯ್ತು. ತನ್ನ ಕೋಣೆ ಹೊಕ್ಕ ಉದಯೋನ್ಮುಖ ಕವಿಪುಂಗವ ಬೆಳಿಗ್ಗೆ ಎಚ್ಚರಾದಾಗಿನಿಂದ ತಲೆಯೊಳಗೆ ಪುಂಖಾನುಪುಂಖವಾಗಿ ಧಿಮಿಗುಡುತ್ತಿರುವ ಸಾಲುಗಳು ತಡ ಮಾಡಿದರೆ ತಲೆಮರೆಸಿಕೊಳ್ಳುತ್ತವೆ ಎನ್ನುವಂತೆ ನೋಟ್ ಪುಸ್ತಕ ಎತ್ತಿಕೊಂಡು ಬರೆಯತೊಡಗಿದ..

ಹಲವು ಸಂಶಯ ತುಂಬಿ
ಮಲೆತು ನಿಂತಿದೆ ಮನಸು
ಗಲಬರಿಸಿ ಚೆಲ್ಲುತ್ತ
ಬೆಳಗಿಸುವ ಬಾ..
ಹುಳಿ, ಬೂದಿ ತಿಕ್ಕುತ್ತ
ತೊಳೆತೊಳೆದು ಬೆಳಗುತ್ತ
ಹಳೆ ಕಿನಿಸು ಮರೆಯುತ್ತ
ಬಾಳೋಣ ಬಾ..!

(ಮುಗಿಯಿತು)